


# ಹೀಗೂ ಉಂಟು!

▶ ಪ್ಯಾರಾಚೂಟು ಮತ್ತು ಗಂಡಸು ಇಬ್ಬರೂ ಒಂದೇ. ತೀರ ಅವಶ್ಯಕತೆ ಇರುವಾಗ ಸಿಗದಿದ್ದರೆ ಮುಂದೆಂದೂ ಅವರ ಅವಶ್ಯಕತೆ ಬರದೇ ಹೋಗಬಹುದು.

★

▶ ರಾಜಕಾರಣಿಗಳೂ ಡಯಾಪರ್‌ಗಳೂ ಒಂದೇ. ಅವುಗಳನ್ನು ಆಗಾಗ ಬದಲಾಯಿಸುತ್ತಿರಬೇಕು– ಒಂದೇ ಕಾರಣಕ್ಕೆ!

★

▶ ನಿಮ್ಮ ಸಲಹೆಯನ್ನು ಯಾರಾದರೂ ಒಪ್ಪಬೇಕು ಅನ್ನುವುದಾದರೆ, 'ಇದನ್ನು ಬೆಂಜಮಿನ್ ಫ್ರಾಂಕ್ಲಿನ್ ಹೇಳಿದ್ದು' ಅಂದುಬಿಡಿ!

★

▶ ಬೆಳಕಿನ ವೇಗವನ್ನು ಕಂಡು ಹಿಡಿದವರು ಕತ್ತಲೆಯ ವೇಗವನ್ನು ಏಕೆ ಕಂಡು ಹಿಡಿಯಲಿಲ್ಲ?

★

▶ 'ಒಳ್ಳೆಯದಕ್ಕೆ ಬೇಗ ಸಾವು ಬರುತ್ತದೆ' ಅನ್ನುವುದು ನಿಜವಾದರೆ, 90ರ ಆಸುಪಾಸಿನಲ್ಲಿರುವ ಹಿರಿಯ ನಾಗರಿಕರನ್ನು ಏನನ್ನುತ್ತೀರ? ಅವರು ಒಳ್ಳೆಯವರಲ್ವೆ?

★

▶ ಪ್ರೀತಿ ಮಾಡು, ಯುದ್ಧ ಮಾಡಬೇಡ. ಆದರೆ ಮದುವೆಯಾಗು.. ಎರಡನ್ನೂ ಮಾಡು!

▶ ನನ್ನಷ್ಟಕ್ಕೆ ನಾನೇ ಮಾತಾಡಿಕೊಳ್ಳುತ್ತೇನೆ. ಇದರಿಂದಾಗಿ ಇತರರಿಗೆ ತೊಂದರೆ. ಯಾಕೆಂದರೆ ನಾನು ಮಾತಾಡಿಕೊಳ್ಳುವಾಗ ಮೈಕ್ ಸಿಸ್ಟಮ್ ಉಪಯೋಗಿಸುತ್ತೇನೆ.

★

▶ ನೀವು ಬುದ್ಧಿವಂತರು ಅಂತ ತೋರಿಸಿಕೊಂಡರೆ ಎಲ್ಲಾ ಕೆಲಸಗಳೂ ನಿಮ್ಮ ತಲೆಯ ಮೇಲೇ ಬೀಳುತ್ತವೆ. ನೀವು ಅತೀ ಬುದ್ಧಿವಂತರಾದರೆ ಅಂತಹ ಕೆಲಸಗಳಿಂದ ನೀವೇ ತಪ್ಪಿಸಿಕೊಳ್ಳುತ್ತೀರಿ!

★



▶ ಅಂದು ಅದೆಂತಹ ಛಳಿ ಇತ್ತು ಅಂದ್ರೆ... ಒಬ್ಬ ಲಾಯರು ತನ್ನ ಕೈಯನ್ನು ತನ್ನ ಪ್ಯಾಂಟಿನ ಜೋಬಿನೊಳಗೇ ಇಟ್ಟುಕೊಂಡಿದ್ದನ್ನು ನಾನು ಕಂಡೆ!

★

▶ ನಾವು ಇರುವುದೇ ಇನ್ನೊಬ್ಬರ ಸಹಾಯಕ್ಕಾಗಿ ಅನ್ನುವುದಾದರೆ, ಆ ಇನ್ನೊಬ್ಬರು ಇರುವುದು ಏತಕ್ಕಾಗಿ?

★

▶ ನೀವು ಸಾಲ ಪಡೆಯುವುದಾದರೆ ನಿರಾಶಾವಾದಿಯಿಂದ ಪಡೆಯಿರಿ. ಏಕೆಂದರೆ ಅವನು ನಿಮಗೆ ಕೊಟ್ಟ ಸಾಲವನ್ನು ನೀವು ವಾಪಸ್ ಕೊಡುತ್ತೀರಿ ಅಂತ ನಿರೀಕ್ಷೆ ಇಟ್ಟುಕೊಂಡಿರುವುದಿಲ್ಲ.

ನೆಟ್‌ನಿಂದ ಹಾರಿಸಿದ್ದು: **ಬೇಲೂರು ರಾಮಮೂರ್ತಿ**